ಮೈಸೂರ ಗೆಜೆಟ್ಟ.

ನಂ. 11. ಸರ್ಕಾರದಿಂದ ಪ್ರಾಯಿಷ್ ಆದ್ದು. ಸನ್ 1877.

ಬೆಂಗಳೂರು, ಶನಿವಾರ, ಮಾರ್ಚೀ ತಾ|| 17, ಸನ್ 1877.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ವ ಕೊಡಗು ಜೀಮೆಗಳ ಚೀಫ್ ಕಮ್ಮಿಷನರವರ ಇಸ್ತಿಹಾರ್ ನಾಮೆಗಳು; ಇಂಡ್ಯ ಗವರ್ಮೆಂಟಿನವರ ಇಸ್ತಿಹಾರ್ ನಾಮೆಗಳು. .. .. ಪುಟ 51—54

2ನೇ ಭಾಗ–ಜುಡಿಷಲ್ ಕಮ್ಮಿಷನರು, ಸರ್ವೇ ವ ಸೆಟಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರ್‌ಟಿಂಡೆಂಟರು, ಡೆಪ್ಯುಟಿ ಅಕ್ಕೌಂಟೆಂಟ್ ಜನರಲ್ಲವರು, ಮಾಣಿ ಆರ್ಡರ್ ಕಂಟ್ರೋಲರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಮಿಲಿಟರಿ ಅಸಿಸ್ಟೆಂಟರು, ರಿಜಿಸ್ಟ್ರೇ ಪ್ರ ಇನ್‌ಸ್ಪೆಕ್ಟರ್ ಜನರಲ್ಲವರು, ವಿದ್ಯಾಖಾಲೆ ಡೈರೆಕ್ಟರು, ಫಾರೆಸ್ಟ್ ಕನಸರ್‌ವೇಟರು, ಮ್ಯುನಿಸಿಪಲ್ ಬೋರ್ಡು ಪ್ರೆಸಿಡೆಂಟರು, ಡಿವಿಜ್ಞ ಜಾತ್ ಕಮ್ಮಿಷನರುಗಳು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಪೊಲೀಸ್ ಸೂಪರ್‌ಟಿಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟ್‌ಆಫಿಸ್ ನೋಟಿಸ್‌ಗಳು. 155—172

3ನೇ ಭಾಗ–ಇಂಡ್ಯ ಗವರ್ಮೆಂಟಿನ ದುಂತ್ಯಾಲೋಚಕ ಸಭೆಯವರ ಆಕ್ಟುಗಳು.

4ನೇ ಭಾಗ–ಟೆಲ್ಲರೆ ವಿಷಯಗಳ ಕಾಗದ ಪತ್ರಗಳು.—

ಸಪ್ಲಿಮೆಂಟ್—ಖಿಲಾಸೇಯಾದ ಖೈದಿಗಳ ಚಹರೆಪಟ್ಟಿ ..

1ನೇ ಭಾಗ.

ಮೈಸೂರು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆ.

ಜನರಲ್.

ಇಸ್ತಿಹಾರ್ ನಾಮೆ.

ನಂ. 407 ತಾರೀಖು 1ನೇ ಮಾರ್ಚೀ 1877.

ಸನ್ 1876ನೇ ಇಸವಿ ನವಂಬರ್ 4ನೇ ಮರ್ತುಂ ಮೈಸೂರು ಗೆಜೆಟಿನಲ್ಲಿ ಪ್ರಾಯಿಷ್‌ಮಾಡಲ್ಪಟ್ಟ ಅದೇನಾಲ್ ಮಾಪೇ 2ನೇ ಮರ್ತುಂ 268ನೇ ನಂಬರ್ ಚೀಫ್‌ಕಮ್ಮಿಷನ್ನರ್‌ಸಾಹೇಬರವರ ಇಸ್ತಿಹಾರಿನಲ್ಲಿ, (1)ನೇ ನಗರ ಆಪ್ಪಗ್ರಾಮ ಡಿವಿಜ್ಞಗಳ ಮಲ್ನಾಡು ತಾಲ್ಲೂಕುಗಳಲ್ಲಿ ವಿನಾ ಇತರ ತಾಲ್ಲೂಕುಗಳಲ್ಲಿ ಜಮ್ಮಿ ಕಂದಾಯದ ಖಿಸ್ತುಗಳು 4ರಿಂದ 7ರ ವರಿಗೂ ಬಡಾಯಿಸಲ್ಪಟ್ಟ್ವು ಆಖೈರು ಖಿಸ್ತು ಬರುವ ಜ್ಞಾ ತಿಂಗಳಲ್ಲಿ ವಾವತಿ ಮಾಡಲ್ಪಡಬೇಕೆಂತಲೂ, (2)ನೇ ಈ ಸಾಲಿಗೆ ಜಮ್ಮಿ ಕಂದಾಯ ವಗೈರೆಗಳ ಬಾಕೀವೇಲೆ ಬಡ್ಡೀ ವಸೂಲ್ಮಾಡಲ್ಪಡುವದಿಲ್ಲವೆಂತಲೂ, (3)ನೇ ಡಿವಿಜ್ಞ ಕಮ್ಮಿಷನ್ನರ್‌ರಿಯವರ ಇಸ್ತಿಹಾರ್ ಮೂಲಕ ಮುಖ್ಯವಾಗಿ ತಪ್ಪಿಸಲ್ಪಡುವ ತಾಲ್ಲೂಕುಗಳಲ್ಲಿ ಯಾ ತಾಲ್ಲೂಕುಗಳ ಪ್ರದೇಶಗಳಲ್ಲಿ ಹುಲ್ಲು ಬನ್ನಿ ಹರಾಜುನಡಿಸಲ್ಪಡುವದಿಲ್ಲವೆಂತಲೂ, ಪ್ರಸಿದ್ಧ ಮಾಡಲ್ಪಟ್ಟಿತು.

2. ಈ ಎರಡು ಸಂವತ್ಸರಗಳಲ್ಲಿ ಅನೇಕ ಡಿಸ್ಟ್ರಿಕ್ಟುಗಳೊಳಗೆ ಬೆಳೆಗಳು ನಷ್ಟವಾಗಿ ಅದರಿಂದ ಸಂಭವಿಸಿದ ಪ್ರಬಲವಾದ ಲುಕ್ಸಾನುಗಳಿಗೆ ನಿಗೆಕೊಟ್ಟು ಜೀನಕಮ್ಮಿಷನ್ನರ್‌ಸಾಹೆಬರವರು, ಈ ಕೆಳಗೆ ನಮೂದಾಗುವ ಮೇರೆ ಮಾಡಲ್ಪಟ್ಟ ಜಾಸ್ತಿ ರಿಯಾಯತ್ತಿಗಳನ್ನು ತಿಳಿಯಪಡಿಸುತ್ತಾರೆ.

1. ಸಾಧಾರಣ ಸಾಗುವಳಿ ಕಾಲದೊಳಗೆ ನೀರು ಬಾರದ ಕೆರೆಗಳ ಕೆಳಗೆ ಇರುವ ಬೀಜ ಜಮೀನುಗಳಿಗೆ, ಮಾರ್ಚಿ, ಏಪ್ರಿಲ್, ಮೇ, ಎ ಜೂನ್ ಪಿಸ್ತುಗಳಲ್ಲಿ, ಅರ್ಧ ಕಂದಾಯ ಸೋಡಿ ಕೊಡತಕ್ಕ ಬಗ್ಗೆ ಡಿಸ್ಟ್ರಿಕ್ಟ್ ಆಫಿಸರಿಗಳಿಗೆ ಅಧಿಕಾರ ಕೊಡಲ್ಪಟ್ಟಿರುತ್ತೆ. ಆದರೆ ಈ ರಿಯಾಯತ್ತಿ, ಕೆಲವು ಬೆಳೆ ಮಾಡಿಕೊಳ್ಳತಕ್ಕ ಬಗ್ಗೆ ವಸತಿ ವುಂಟಾದ ಜಮೀನ್‌ದಾರ್ರುಗಳಿಗೆ ತೋರಿಸಲ್ಪಡಲಿಕ್ಕೆ ಪ್ರಶ್ನೆಯಿಸಲ್ಪಟ್ಟಿರುವದಿಲ್ಲ. ಮತ್ತು ಜವಾಬುದಾರಿ ಮಾಡುವ ಆಫೀಸರರು, ಈ ಹುಕ್ಕುಂ ಲಗಾವಿ ಮಾಡತಕ್ಕದ್ದು ಅಯುಕ್ತವೆಂದು ಸಂಗತಿಗಳಿಂದ ಯಾವಾಗ ತಮಿಗೆ ಕಾಣಬರುತ್ತೋ ಆಗ ಸದರೀ ರಿಯಾಯತ್ತನ್ನು ತೋರಿಸದೇ ಬಿಡಲಿಕ್ಕೆ ಅವರಿಗೆ ಯುಕ್ತವಾಗಿರತಕ್ಕದ್ದು.

2. ನಾಲೆಗಳ ಮತ್ತು ಬಾವಡಿಗಳ ಕೆಳಗೆ ಇರುವ ಜಮೀನುಗಳು ನೀರು ಇಲ್ಲದೆ ಹೋದ್ದರಿಂದ ಉಭಯ ಸಾಗುವಳಿ ಕಾಲದಲ್ಲಿಯು ಸಾಗುವಳಿ ಆಗಲಿಕ್ಕೆ ಯಾವ ರಹಾನ್ಸಾ ಇಲ್ಲದೆ ಇದ್ದಲ್ಲಿ, ಕಮ್ಮಿಷನ್ನರವರ ಹುಕ್ಕುಂ ಪ್ರಕಾರ ವಿಚಾರಿಸಿ, ಮುಖ್ಯವಾಗಿ, ಅರ್ಧಕಂದಾಯ ಸೋಡಿಸಿಕೊಡಲ್ಪಡಬಹುದು.

3. ಬೆಳೆ ಇಲ್ಲದೆ ಹೋಗಿ ಬಹಳವಾಗಿ ಲುಕ್ಸಾನಪಟ್ಟ ಹಾಲ್ಲೂಕುಗಳಲ್ಲಿ ಯಾ ಪೂರ್ತಿಗಳಲ್ಲಿರುವ ಖುಷ್ಕಿ ಜಮೀನುಗಳ ವಿಷಯದಲ್ಲಿ, ಯಾವ ರೈತರು ತಾವು ಕೊಡತಕ್ಕ ಜಮೀನು ಕಂದಾಯವು 35 ರೂಪಾಯಿಗಳಾಗಿಯೂ ಅದಕ್ಕೆ ಕಮ್ಮಿಯಾಗಿಯೂ ಇರುತ್ತೋ ಅಂತಾ ರೈತರಿಗೆ ಬಾಲತಿ ಇಸವಿ ತೆರಿಗೆ ಯು, ಕಡೇ 3 ಕಿಸ್ತುಗಳ ಹಣವನ್ನು ಪೂರಾ ಸೋಡಿ ಮಾಡತಕ್ಕ ಬಗ್ಗೆ ಡಿಪ್ಯೂಟಿ ಕಮ್ಮಿಷನ್ನರ್‌ಗಳಿಗೆ ಅಧಿಕಾರ ಕೊಡಲ್ಪಟ್ಟಿರುತ್ತೆ. ಮತ್ತು ಸದರೀ ಮೊಬಲಗಿಂತಲೂ ಹೆಚ್ಚು ಕಂದಾಯ ಈಟ್ಟುವ ಸಂಗತಿಗಳಲ್ಲಿ ಎರಡು ಕಿಸ್ತುಗಳು ಪೂರಾ ಸೋಡಿ ಮಾಡಲ್ಪಡಬಹುದು. ಸದರೀ ಉಭಯ ಸಂಗತಿಗಳೊಳಗೂ, ಮುಂದಿನ ಸಾಲಿನಲ್ಲಿ ವಸೂಲ್ಮಾಡಲ್ಪಡತಕ್ಕ ಬಗ್ಗೆ, ಬಂದು ಜಾಸ್ತಿ ಕಿಸ್ತನ್ನು ನಿಲ್ಲಿಸುವಂತೆ ಡಿಪ್ಯೂಟಿ ಕಮ್ಮಿಷನ್ನರವರು ಹುಕ್ಕುಂ ಮಾಡಬಹುದು. ಆದರೆ ಹಾಂಗೆ ನಿಲ್ಲಿಸಬೇಕಾದ್ದು ಖಂಡಿತವಾಗಿ ಅವಶ್ಯಕವೆಂದು ಎಣಿಸಲ್ಪಟ್ಟಲ್ಲೇನೇ ಹುಕ್ಕುಂ ಮಾಡಬಹುದು.

4. ಈ ಇಸ್ತಿಹಾರ್ ಮುಖ್ಯವಾಗಿ ಎಲ್ಲಿಗೆ ಸಂಬಂಧಪಡುತ್ತೋ ಆಂತಾ ಪ್ರದೇಶಗಳಲ್ಲಿ ಸದರೀ ಇಸ್ತಿಹಾರ್ ಪೂರಾ ಪ್ರಸಿದ್ಧಪಡಿಸಲ್ಪಡತಕ್ಕದ್ದೆಂದು ಜೀಫ್ ಕಮ್ಮಿಷನ್ನರ್‌ಸಾಹೆಬರು ಅಪ್ಪಣೆಕೊಡಿಸುತ್ತಾರೆ.

ನಂ. 408 ತಾರೀಖು 26ನೇ ಫಿಬ್ರವರೀ 1877.

ಸ್ಯ 1870ನೇ ಇಸವಿ 10ನೇ ನಂಬರ್ ಲ್ಯಾಂಡ್ ಅಕ್ವಿಜೇಷನ್ ಆಕ್ಟಿನ 6ನೇ ಸೆಕ್ಷನ್ ನಿರ್ಬಂಧನೆಗಳನುಸರಿಸಿ ಇದರಿಂದ ತಿಳಿಸಲ್ಪಡುವದೇನಂದರೆ ಲಷ್ಕರ್ ಪೊವಲಾ ಕಾಕಿ ಫೈಲ್‌ವಾರ್ ಬೀದಿಯಿಂದ ದೊಡ್ಡ ಕೆರೆಗೆಹೋಗುವ ರಸ್ತೆಯ ರುಂದಿಯನ್ನು ಬಡಾಯಿಸುವಬಗ್ಗೆ ಈ ಕೆಳಗಿನ ತಖ್ತೆಯಲ್ಲಿ ನಮೂದ್ಮಾಡಲ್ಪಟ್ಟಿರುವ ಮನೆಯು ಜಮೀನು ಸಹಾ ಮೈಸೂರು ಮ್ಯುನಿಸಿಪಾಲಿಟಿಯವರಿಗೆ ಬೇಕಾಗಿರುತ್ತೆ.

ನಂ.	ಪೊಹಲಾ	ಮೌಲೀಕನ ಹೆಸರು	ಜಮೀನು ತಪಶೀಲ್	ಬೀಜವರಿ			ಪರಮಾಣ	ಕಂದಾಯ	ಚೌತಫಿಗ
				ಲಾಂಬಿ	ರುಂದಿ	ಉಂಜಿ			
1	ಲಷ್ಕರ್ ಪೊಹಲಾ	ಮಲೀಕನಿ ಸೋಸಾಯಿ	ಖಾಲಿಜಮೀನು 1ನೇ ಸಖಂ	68	49	..	3332	ಪ್ರತಿ ಚದರ ಅಡಿಗೆ ಒಂದು ಪೈಸೆಯಂತೆ ಕಂದಾಯ ಕಟ್ಟತಕ್ಕದ್ದು	ಉತ್ತರಕ್ಕೆ ಸರಕಾರ ರಸ್ತೆ
			2ನೇ ಡಿಟೋ	116	61	..	7076		ಪೂರ್ವಕ್ಕೆ ಸರಕಾರ ರಸ್ತೆ
			3ನೇ ಡಿಟೋ	67	8	..	536		ದಕ್ಷಿಣಕ್ಕೆ ಮುನಿಸಿಪಾಲಿಟಿಗೆ ಸೇರಿದ ಖಾಲಿ ಜಮೀನು
							10944 ಅಡಿಗಳು ಅಥವಾ 1216 ಸಲಿಗ ಜಗಳು		ಪಶ್ಚಿಮಕ್ಕೆ ಪೂರ್ಣಯ್ಯನವರ ನಾಲಾ
			ಹೆಂಚಿನ ರಾಂಡಾ	12 ಅಂಕಣಗಳು					

245

ನಂ. 418. ತಾರೀಖು 7ನೇ ಮಾರ್ಚಿ 1877.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ—ನಂದಿದುರ್ಗ ಡಿವಿಜನಲ್ಲಿ ತಂಗಡಿ ಜಕ್ಕೆಯ ತೀರ್ವೆಯು ಸ॥ 1877ನೇ ಇಸವಿ ಏಪ್ರಿಲ್ ಗುರ್ಯೇ ಲಗಾಯತು ಜಕಡಾ ಭಂಡಿ ಭೋಜೆ ಪೊಂದಕ್ಕೆ 5 ರೂಪಾಯಿನಿಂದ 8 ರೂಪಾಯಿಗೆ ಬಡಾಯಿಸಲ್ಪಡುವದು.

ನಂ. 429. ತಾರೀಖು 10ನೇ ಮಾರ್ಚೀ 1877.

ಬೆಂಗಳೂರು ಕಂಟೋನ್ಮೆಂಟು ಮ್ಯುನಿಸಿಪಾಲಿಟೀಕ್ಕೆ ಸಂಬಂಧಪಟ್ಟ ಇದರಡಿ ಬರುವ ತಿದ್ದುಪಡಿಯಾದ 25ನೇ ನಂಬರ್ ಬೈಲಾ ನಿಬಂಧನೆಯು ಜೀಪ್ ಕಮ್ಮಿಷನರವರಿಂದ ಮಂಜೂರಾಗಿ ಸರ್ವಜನಗಳಿಗೂ ತಿಳಿಯತಕ್ಕ ಬಗ್ಗೆ ಪಾಯಿಷ್ ಮಾಡಲ್ಪಡುತ್ತೆ.

ನಂ.—25—ಯಾವ ಮನುಷ್ಯನ ಆವರಣದೊಳಗೆ ಯಾವ ಜೀವರಾಗಲಿ ಸಾಯುತ ದೋ ಅಂತಾ ಪ್ರತಿ ಮನುಷ್ಯನು ಅಂತಾ ಜೀವ ಜಂತುವು ಸತ್ತ 9 ಘಂಟೆಗಳ ಕಾಲದೊಳಗಾಗಿ ತನ್ನ ಸ್ವಂತ ಲಾಗವಡುನಿಂದ, ಮುರ್ದೆಯನ್ನು ಕತ್ತರಿಸದೆಯೂ, ಅಥವಾ ತೆರೆಯದೆಯೂ, ಕಮ್ಮಿಷನರವರಿಂದ ಮುರ್ದೆಗಳು ಸಾಗಿಸಲ್ಪಡತಕ್ಕ ಬಗ್ಗೆ ಪ್ರತ್ಯೇಕವಾಗಿ ನಿಯಮಿಸಲ್ಪಡುವ ಸ್ಥಳಕ್ಕೆ ಸಾಗಿಸತಕ್ಕದ್ದು, ಅಥವಾ ಅದು ಸತ್ತ ಸಂಗತಿಯನ್ನು ಕುರಿತು, ಸದರೀ ಆವರಣವು ಯಾವ ಡಿವಿಜನಿಗೆ ಸೇರಿರುತ್ತೊ ಆ ಡಿವಿಜನ ಕ್ಯಸರ್ವೆಸೀ ಒವರಿಯರ್‌ಯವರಿಗೆ, ರಿಪೋರ್ಟು ಮಾಡತಕ್ಕದ್ದು. ಹಾಗೆ ರಿಪೋರ್ಟು ಮಾಡುವ ಪಕ್ಷಕ್ಕೆ, ಪ್ರಸಿಡೆಂಟು ರವರು ಆಗಿಂದಾಗ್ಯೆ ನಿಷ್ಕರ್ಷಿಸುವದರ ಪ್ರಕಾರ, ಆ ಮುರ್ದೆ ಸಾಗಿಸತಕ್ಕ ಬಗ್ಗೆ ಲಾಗವಡನ್ನು ಸದರೀ ಒವರ್‌ಸಿಯರವರಿಗೆ ಕೊಡತಕ್ಕದ್ದು.

ಯಾವ ಮನುಷ್ಯನು ಈ ಬೈಲಾ ನಿಬಂಧನೆಗೆ ಉಲ್ಲಂಘನೆಯಾಗಿ ನಡೆಯುತ್ತಾನೊ ಅಂತಾ ಮನುಷ್ಯನು ಮಾಜಸ್ಟ್ರೇಟು ರಮುಂದೆ ಅಪರಾಧ ಸ್ಥಾಪಿಸಲ್ಪಟ್ಟ ವೇಳೆ 20 ರೂಪಾಯಿಗೆ ವಿಾರದ ಬಂದು ಜುರ್ಮಾನೆಗೆ ಗುರಿಯಾಗತಕ್ಕದ್ದಲ್ಲದೆ ಸದರೀ ಅಪರಾಧವು ನಡಿಸಲ್ಪಡುತ್ತಿರುವ ಪ್ರತಿ 9 ಘಂಟೆಗೂ 10 ರೂಪಾಯಿಗೆ ವಿಾರದ ಜಾಸ್ತೀ ಜುರ್ಮಾನೆಗೆ ಸಹಾ ಗುರಿಯಾಗತಕ್ಕದ್ದು.

ನಂ. 430. ತಾರೀಖು 13ನೇ ಮಾರ್ಚೀ 1877.

ಮೊದಲು ಕೊಟ್ಟ ಇಸ್ತಿಹಾರ್‌ಗಳನ್ನು ರದ್ದುಮಾಡಿ ಜೀಪ್‌ಕಮ್ಮಿಷನ್ನರ್ ಸಾಹೇಬರವರು ಆಜ್ಞಾಪಿಸಿರುವದೇನಂದರೆ, 1876ನೇ ಇಸವಿ ಡಿಸಂಬರ್ 19ನೇ ಮುಕ್ತಂ 3297ನೇ ನಂಬರ್ ಬಾಬತು ಇಂಡ್ಯಗವರ್ನಮೆಂಟ್ ಪಿನ್ಯಾನಿಯಲ್ ಇಲಾಖೆಯವರ ರಿಜೋಲ್ಯೂಷನ್ನಲ್ಲಿ ಕೊಡಲ್ಪಟ್ಟ ಅಧಿಕಾರವನ್ನು ಅನುಸರಿಸಿ ಮೈಸೂರು ೀಮೆ ಖಾಯಂ ಸಿವಿಲ್ ಇಲಾಖೆಗೆ ಸೇರಿದ ಮತ್ತು ಮಾಹೇನಾ 16 ರೂಪಾಯಿ ತಲಬಿಗೆ ವಿಾರದ ಅಥವಾ ಕುದರೆ ಇಡಜೇಕಾದವರ ಪೈಕಿ ಮಾಹೇನಾ 25 ರೂಪಾಯಿ ತಲಬಿಗೆ ವಿಾರದ ದ ರೋಬಸ್ತು ನವುಕರರಿಗೆ 1877ನೇ ಇಸವಿ ಮಾರ್ಚಿ ತಲಬು ಬಟವಾಡೆ ಲಗಾಯಿತು 3 ತಿಂಗಳ ಪರ್ಯಂತ ಮಾಹೇನಾ 1½ ರೂಪಾಯಿವೀತೆ ಜಾಸ್ತಿ ಅಲೌನ್ಸ್ ಕೊಡಲ್ಪಡತಕ್ಕದ್ದು.

ಈ ಅಲೌನ್ಸ್ ಮೊಬಲಗನ್ನು ಮಾಹೇವಾರಿ ಲಿಬ್ಬಂದಿ ಬರಾವರ್ದಗಳಲ್ಲಿ ಮೊದಲಿನಂತೆ ದಾಖಲ್ಮಾಡಿ ತೆಗದು ಕೊಳ್ಳತಕ್ಕದ್ದು.

ನಂ. 431. ತಾರೀಖು 10ನೇ ಮಾರ್ಚಿ 1877.

ಸ॥ 1876ನೇ ಇಸವಿ ಡಿಸಂಬರ್ 14ನೇ ಮುಕ್ತಂ 332ನೇ ನಂಬರ್ ಇಸ್ತಿಹಾರ್ ಅನುಸರಿಸಿ, ಇಂಡಿಯ್ಯ ಮೆಡಿಕಲ್ ಇಲಾಖಾ ಸರ್ಜ ರಾಬಿಂಸ್‌ಯವರು, ಹಂಗಾಮಿ ಯೇರ್ಪಾಡು ತರೀಕ, ಮತ್ತೊಂದು ಹುಕ್ಕುಂ ಕೊಡುವ ಪರಿಯಂತ, ಅಪ್ಪಗಾವು ಡಿವೀಜ್ಞ ಸಿವಿಲ್ ಸರ್ಜ್ಞನ್ ಕೆಲಸವನ್ನು ಮೈಸೂರಲ್ಲಿ ಜೈಲ್ ಸೂಪ್ರಿಟೆಂಡೆಂಟಿ ಕೆಲಸವನ್ನು ಸಹಾ ಆಕ್ಟಿಂಗ್ ತರೀಕ ನೋಡುತ್ತಾ ಇರತಕ್ಕದ್ದು.

2 ಸರ್ಜ್ಞನ್ ರಾಬಿಂಸ್‌ಯವರು, ಸರ್ಜ್ಞನ್ ಮೆಕ್ಕಾರ್ಟ್‌ಯವರಿಂದ ಆಫಿಸ್ ಚಾರ್ಜು ತೆಗದುಕ್ಕೊಳ್ಳುವ ತಾರೀಕ ಲಾಗಾಯತು ಮೈಸೂರಲ್ಲಿ ಕೆಮಿಕಲ್ ಯಗ್ಜಾಮಿನರ್ ಕೆಲಸ ಆಕ್ಟಿಂಗ್ ತರೀಕ ನೋಡುವಂತೆ ಸಹಾ ಮೊಕರರ್.

ನಂ. 432. ತಾರೀಖು 14ನೇ ಮಾರ್ಚೀ 1877.

ಈ ಕೆಳಗೆ ನಮೂದಿಸಲ್ಪಡುವ ತಾಲ್ಲೂಕುಗಳು, ಮತ್ತೊಂದು ಹುಕ್ಕುಂ ಕೊಡುವವರಿಗೂ, ಕೊಲಾರ ಡಿಸ್ಟ್ರಿಕ್ಟ್ ಬಂದು ಸಬ್ ಡಿವಿಜ್ ಆಗಿ ಯೇರ್ಪಟ್ಟು ಹೆಡ್‌ಕ್ವಾರ್ಟರ್ ಸಬ್ ಡಿವಿಜ್ಞಯಂಬದಾಗಿ ಕರಿಯಲ್ಪಡತಕ್ಕದ್ದು.

ಕೊಲಾರ, ಬೇತಮಂಗಲ, ಮಾಲೂರು, ಮುಳಬಾಗಲ್, ಶ್ರೀನಿವಾಸಪುರ.

2 ಕೊಲಾರ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮ್ಮಿಷನ್ನರ್ ಮೆಸ್ಟರ್ S. ವೆಂಕಟವರದಿ ಸ್ಯಂಗಾರ್‌ಯವರು ಕೊಲಾರ ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್ ಸಬ್ ಡಿವಿಜಿಗೆ ಹಾಕಲ್ಪಟ್ಟಿರುತ್ತಾರೆ. ಮತ್ತು, ಆ ಕೆಲಸದಬಗ್ಯೆ, 1872ನೇ ಇಸವಿ 10ನೇ ನಂಬರ್ ಆಕ್ಟು ಕ್ರಿಮಿನಲ್ ಪ್ರೊಸಿಜ್ಯೂರ್‌ಕೋಡ್ 28ನೇ ಸೆಕ್ಷನ್ನುಲ್ಲಿ ನಮೂದಿಸಲ್ಪಟ್ಟ ಜಾಸ್ತೀ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ.

ನಂ. 433. ತಾರೀಖು 15ನೇ ಮಾರ್ಚೀ 1877.

ಚಿತ್ರದುರ್ಗ ಡಿಸ್ಟ್ರಿಕ್ಟು ದಾವಣಗೆರೆ ತಾಲ್ಲೂಕು ಅಮಲ್ದಾರ್ ಶಾಮೈಯ್ಯಂಗಾರಿಗೆ 1872ನೇ ಇಸವಿ 10ನೇ ನಂಬರ್ ಆಕ್ಟು ಕ್ರಿಮಿನಲ್ ಪ್ರೊಸಿಜ್ಯೂರ್‌ಕೋಡ್ 19ನೇ ಸೆಕ್ಷನ್ ಅರ್ಥರೀತ್ಯಾ 3ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳೂ, 23 (*a*) ಸೆಕ್ಷನ್ 1 ಮತ್ತು 2ನೇ ಕ್ಲಾಸ್‌ಗಳಲ್ಲಿ ನಮೂದಿಸಲ್ಪಟ್ಟಿರುವ ಜಾಸ್ತೀಅಧಿಕಾರಗಳೂ ಕೊಡಲ್ಪಟ್ಟಿರುತ್ತೆ. ಫಿರ್ಯಾದಿಗಳ ಮತ್ತು ಸಾಕ್ಷಿಗಳ ಸಾಕ್ಷ್ಯವನ್ನು ಕನಡಭಾಷೆಯಲ್ಲಿ ಸ್ವತಃ ತೆಗದುಕೊಳ್ಳಲಿಕ್ಕೆ ಜರ್ಜ ಆಕ್ಟು 33ನೇ ಸೆಕ್ಷನ್ ಅನುಸರಿಸಿ ಅಪ್ಪಣೆ ಸಹಾ ಕೊಡಲ್ಪಟ್ಟಿರುತ್ತೆ.

"ಬಮೋಜೀಬ್ ಹುಕ್ಕುಂ,"

T. CLARKE,
Offg. Secretary.

ಮಿಲಿಟರಿ ಇಲಾಖೆ.

ನಂ. 434. ತಾರೀಖು 9ನೇ ಮಾರ್ಚಿ 1877.

ಇಂಡ್ಯದೇಶದಲ್ಲಿ ವಾಲಂಟಿಯರ್ ಫೌಜಿಗೋಸ್ಕರ ಯೇರ್ಪಟ್ಟ ಕಾರ್ಯಗಳ 5ನೇ ಸೆಕ್ಷನ್ 62ನೇ ಕಲಂ ಅನುಸರಿಸಿ ಬೆಂಗಳೂರು ರೈಫಲ್ ವಾಲಂಟಿಯರ್‌ಗೆ ಕೀರಿವ ಇದರಡಿ ನಮೂದಿಸಲ್ಪಡುವ ಆಫಿಸರ್‌ಗಳಿಗೆ ಅವರವರ ಹೆಸರಿನ ಬಿ ನಮೂದಿಸಿರುವ ಪ್ರಕಾರ ರಜಾ ಕೊಡಲ್ಪಟ್ಟಿದೆ.

ಕೆಪ್ಟನ್. ಟೀಟೆಯವರಿಗೆ 1877ನೇ ಇಸವಿ ಫಿಬ್ರವರಿ 28ನೇ ಮುಕ್ತುಂ ಲಾಗಾಯಿತು 6 ತಿಂಗಳ ರಜಾ.

ಲೆಫ್ಟಿನೆಂಟ್ ಹ್ಯಾಡಕ್‌ಯವರಿಗೆ 1877ನೇ ಫಿಬ್ರವರೀ 21ನೇ ಮುಕ್ತುಂ ಲಗಾಯಿತು 6 ತಿಂಗಳ ರಜಾ.

"ಬಮೋಜೀಬ್ ಹುಕ್ಕುಂ,"

T. CLARKE,
Offg. Secretary.